doc-552
T.P-2

Reg No B G 155 ಶ್ರೀ 28 — 9 —72

In The State **First Golden Jubilee Celebrated Paper 'Satyavadi' daily, Mysore 4**

56th Year of Publication

★

News, Views, Dharmic Moral Ethical Matters

ರಾಜ್ಯದಲ್ಲಿ ಪ್ರಥಮ
ಮಹೋತ್ಸವ
ಸಿರಿ ಮೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭ್ರಷ್ಟಾಚಾರವನ್ನು ಮಟ್ಟಹಾಕಲಾಗುವುದು

Acknowledgement

We acknowledge with thanks the receipt of Srimat Sri Upendra Mohan Birthday Centenary Special Number of the 'Truth' (Calcutta). It is full of interesting and thoughtful articles re the glorious aspects of Sri Upendramohanji's life, the greatness of the Vedic and Hindu religion, the praiseworthy activities of the Shastra Dharma Prachara Sabha etc. and is worthy of being read and reread and preserved for ever.

★

ರೆಡ್‌ಕ್ರಾಸ್ ಮೇಲೆ ಆರೋಪ

ನವದೆಹಲಿ— ರೆಡ್ ಕ್ರಾಸ್‌ನ ಅಂತರ್ರಾಷ್ಟ್ರೀಯ ಸಮಿತಿಯು ರಾಜಕೀಯ ಸಮಸ್ಯೆಗಳಲ್ಲಿ ಪಕ್ಷ ವಹಿಸುತ್ತಿರುವುದೆಂದು ಭಾರತ ಆರೋಪಿಸಿದೆ.

★

ರೂ 26 ಕೋಟಿ ಕೇಳಿಕೆ

ಹೈದರಾಬಾದು— ಪ್ರಧಾನಿಯವರು ಆಂಧ್ರಪ್ರದೇಶಕ್ಕೆ ವಾಗ್ದಾನ ಮಾಡಿದ್ದ ರೂ 26 ಕೋಟಿಯ ಬಿಡುಗಡೆಗಾಗಿ ಕೇಂದ್ರವನ್ನು ಆಂಧ್ರಪ್ರದೇಶ ಸರಕಾರ ಕೇಳಿದೆ

●

ಕರ್ನಾಟಕ

ನವದೆಹಲಿ— ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಪುನರ್ನಾಮಕರಣಕ್ಕೆ ಕೇಂದ್ರ ಸರಕಾರ ಅನುಮತಿಸಿದೆ — ಅವಶ್ಯಕವಾದ ಮಸೂದೆಯನ್ನು ಚಳಿಗಾಲದ ಪಾರ್ಲಿಮೆಂಟು ಅಧಿವೇಶನದಲ್ಲಿ ತರಲಾಗುವುದು

ಹೀಗಾದರೆ ಒಳ್ಳೇದು

ಗುಲ್ಬರ್ಗ— ರಾಜ್ಯದಲ್ಲಿ ಈಗ ಪ್ರಬಲಗೊಂಡಿರುವ ಭ್ರಷ್ಟಾಚಾರ ಮತ್ತು ಸ್ವಪ್ರಯೋಜನ ಕಾರ್ಯಗಳನ್ನು ಮಟ್ಟಹಾಕಲು ಸರಕಾರ ನಿರ್ಧರಿಸಿರುವುದಾಗಿ ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು ಇಲ್ಲಿ ಭಾರಿ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

★

ಅನ್ನದಾನ

ಪ್ರೊದಟೂರು— ಭಾರತ ಸ್ವಾತಂತ್ರ್ಯದ ರಜತೋತ್ಸವ ಮತ್ತು ಪ್ರಕಾಶಂ ಶತಮಾನೋತ್ಸವದ ಅಂಗವಾಗಿ ವ್ಯವಸಾಯ ಮಾರುಕಟ್ಟೆ ಸಮಿತಿಯು ಮಂಗಳವಾರ ಸಾಮೂಹಿಕ ಅನ್ನದಾನ ಉದ್ಘಾಟಿಸಿತು ; ಭೋಜನಕ್ಕೆ ಬಂದಿದ್ದವರ ಸಂಸಾರಗಳಿಗೆ ಅಲ್ಯೂಮಿನಿಯಂ ಪಾತ್ರೆಗಳನ್ನೂ ದಾನ ಮಾಡಲಾಯಿತು

★

ವಿರೋಧ

ಶಿವಮೊಗ್ಗ— ಕರ್ನಾಟಕ ಕ್ರಾಂತಿ ಪಕ್ಷದ ಅಧ್ಯಕ್ಷರೂ ಶಾಸಕರೂ ಆದ ಶ್ರೀ ಬಂಗಾರಪ್ಪನವರು, ಮಾಜಿ ಮಹಾರಾಜರು ಅರಮನೆ ನಾರಲು ಅಧಿಕಾರ ಕೊಡುವ ಶಾಸನವನ್ನು ತಾವು ವಿರೋಧಿಸುವುದಾಗಿ ಹೇಳಿರುವರು.

★

ರೂ. 4 ಕೋಟಿ ನಷ್ಟ

ನವದೆಹಲಿ— ಚಲಚ್ಚಿತ್ರಗಳ ಅಕ್ರಮ ಸಾಗಾಣಿಕೆಯಿಂದ ರೂ. 4 ಕೋಟಿ ನಷ್ಟವಾಗುತ್ತಿರುವುದೆಂದು ಭಾರತ ಚಲಚ್ಚಿತ್ರ ಸಂಘದ ಅಧ್ಯಕ್ಷರು ಹೇಳಿದರು.

★

ದಿನ್ಯಾಣಿ

ನಮ್ಮಲ್ಲಿ ಸಾಂಸ್ಕೃತಿಯು ತಲೆನೋವಿನಿಂದ ಕೊನೆಗೊಳ್ಳುತ್ತದೆ. — ಎಮರ್ಸನ್

ಕಮ್ಯೂನಿಸ್ಟ್ ಪಾರ್ಟಿ ಚಳವಳಿ

ನವದೆಹಲಿ— ಏರುತ್ತಿರುವ ಬೆಲೆಗಳು ನಿರುದ್ಯೋಗ, ಕಾಂಗ್ರೆಸ್ ಮತ್ತು ಸರಕಾರದಲ್ಲಿತ್ತ ಆಶ್ವಾಸನದಿಂದ ಸರಿಯುತ್ತಿರುವದನ್ನು ಪ್ರತಿಭಟಿಸಿ, ಕಮ್ಯೂನಿಸ್ಟ್ ಪಾರ್ಟಿಯು ಅಕ್ಟೋಬರು 3 ರಿಂದ ರಾಷ್ಟ್ರಿಯ ಸತ್ಯಾಗ್ರಹಕ್ಕೆ ಕರೆಯಿತ್ತಿದೆ.

★

ಶಾಸನೋಲ್ಲಂಘನೆ

ಕೊಲಂಬೊ— ತಮಿಳು ಸಂಯುಕ್ತ ರಂಗವು ಅಕ್ಟೋಬರು 2 ರಂದು ಪ್ರಾರಂಭಿಸಬೇಕೆಂದಿದ್ದ ಶಾಸನೋಲ್ಲಂಘನ ಚಳವಳಿಯನ್ನು ಅನಿರ್ದಿಷ್ಟ ಕಾಲ ಮುಂದಕ್ಕೆ ಹಾಕಲಾಗಿದೆ

★

ವಿದ್ಯಾರ್ಥಿಗಳಿಗೆ ಹಿತಬೋಧೆ

ಮೈಸೂರು— ಅವಶ್ಯ ಪದಾರ್ಥಗಳ ಬೆಲೆ ಹೆಚ್ಚಿಕೆಯ ಕಾರಣದಿಂದ, ಅಕ್ಟೋಬರು 2 ರಂದು ಪಡೆಯುವ ಮುಖ್ಯ ಮಂತ್ರಿಗಳ ಸಭೆಯಲ್ಲಿ ಅನೌಪಚಾರಿಕ ಅಥವ ಔಪಚಾರಿಕ ರೇಷನಿಂಗ್ ಜಾರಿಯ ಬಗ್ಗೆ ಪರ್ಯಾಲೋಚಿಸಲ್ಪಡಬಹುದೆಂದು ಕಾರ್ಮಿಕ ಮತ್ತು ಪ್ರವಾಸೋದ್ಯಮ ಮಂತ್ರಿ ಶ್ರೀ ಅಜೀಜ್ ಸೇಟ್‌ರವರು ವಿದ್ಯಾರ್ಥಿ ಪ್ರತಿನಿಧಿಗಳನ್ನುದ್ದೇಶಿಸಿದ ಭಾಷಣದಲ್ಲಿ ಸೂಕ್ಷ್ಮವಾಗಿ ತಿಳಿಸಿದರು ; ಬೆಲೆ ಏರಿಕೆ ನಗರದಲ್ಲಿ ಮಾತ್ರವಲ್ಲದೆ, ದೇಶದಲ್ಲೆಲ್ಲಾ ಇದೆಯೆಂದೂ ನಿವಾರಣೆ ಮಾರ್ಗ ಪರ್ಯಾಲೋಚಿಸಲಾಗುತ್ತಿದೆಯೆಂದೂ ತಿಳಿಸಿದರು --ವಿದ್ಯಾರ್ಥಿಗಳು ಮುಷ್ಕರ ಹೂಡಬಾರದೆಂದೂ, ಹಿಂಸಾಕೃತ್ಯಗಳಿಗೆ ಕೈಹಾಕಬಾರದೆಂದೂ ತಿಳಿಸಿದರು.

★

ಹೋಟಲುಗಳ ಬಂದ್

ಮೈಸೂರು— ಹೋಟಲು ಮಾಲೀಕರ ಸಂಘ ಕರೆಯಂತೆ ಇಂದು ಎಲ್ಲಾ ಹೋಟಲುಗಳು ಬಂದ್ ಆಗಿದ್ದವು

ಮದರಾಸು ಕನ್ನಡ ಸಂಘ

ಮದರಾಸು— ಸ್ಥಳೀಯ ಕನ್ನಡ ಸಂಘವು ಒಂದು ಸ್ಕೂಲು ಮತ್ತು ಸಮಾಜ ಸಭಾಂಗಣ ಕಟ್ಟಿಕೊಳ್ಳಲು ನಿವೇಶನಕ್ಕೆ ಮಾಡಿಕೊಂಡಿರುವ ವಿನಂತಿಯನ್ನು ಕ್ಷಿಪ್ರದಲ್ಲೇ ಅನುಕೂಲಿಸಲು ಪರ್ಯಾಲೋಚಿಸಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ಕರುಣಾನಿಧಿಯವರು ತಿಳಿಸಿದರು — ಸಂಘವು ಅವರನ್ನು ರಾಜ್ಯೋತ್ಸವದಲ್ಲಿ ಅಧ್ಯಕ್ಷತೆ ವಹಿಸಬೇಕೆಂದು ವಿನಂತಿಸಿದ್ದ ಆಹ್ವಾನವನ್ನು ಸ್ವೀಕರಿಸಿರುವರು.

★

ಕಾಳೀನದಿ ವಿದ್ಯುತ್ ಪ್ರಾಜೆಕ್ಟ್

ನವದೆಹಲಿ— ಕಾಳೀನದಿ ವಿದ್ಯುತ್ ಪ್ರಾಜೆಕ್ಟಿಗೆ 4 ನೇ ಯೋಜನೆಯ ಮಿಕ್ಕಿರುವ ಅವಧಿಯಲ್ಲಿ ಭಾರತ ಸರಕಾರ ಅರ್ಥ ನೆರವು ನೀಡಲು ಸಮ್ಮತಿಸಿದೆ ; 72–73 ರಲ್ಲಿ ರೂ. 13 5 ಕೋಟಿ ಕೊಡಲಾಗುವುದು ; ಈಗಾಗಲೇ ರೂ 337.5 ಲಕ್ಷ ರಾಜ್ಯಸರಕಾರಕ್ಕೆ ಬಿಡುಗಡೆಮಾಡಲಾಗಿದೆ

★

ಹೊಸ ಕಾಂಗ್ರೆಸ್ಸಿಗೆ ಸೇರಿದರು

ಮಂಡ್ಯ— ಹಳೇ ಕಾಂಗ್ರೆಸ್ಸಿನನಾಯಕರೂ, ಹಳೇ ಪ್ರದೇಶ ಕಾಂಗ್ರೆಸ್ ಉಪಾಧ್ಯಕ್ಷರೂ ಆದ ಶ್ರೀ ಶಂಕರೇಗೌಡರು ಹೊಸ ಕಾಂಗ್ರೆಸ್ಸಿಗೆ ಸೇರಿದರು.

●

ಡಾಕ್ಟರುಗಳ ಮುಷ್ಕರ

ಹೈದರಾಬಾದು— ಮಂಗಳವಾರ ಪ್ರಾರಂಭವಾದ ಹೌಸ್ ಸರ್ಜರಿಗಳ ಮತ್ತು ಸ್ನಾತಕೋತ್ತರ ವೈದ್ಯವಿದ್ಯಾರ್ಥಿಗಳ ಮುಷ್ಕರದಿಂದ ಆಸ್ಪತ್ರೆಗಳಲ್ಲಿ ಕೆಲಸ ತಣ್ಣಗಾಗಿದೆ.

○ ಸಕ್ಕರೆ ಉತ್ಪಾದನೆ ಹೆಚ್ಚಿಸುವ ಆಶಯದಿಂದ ಕೇಂದ್ರ ಸರಕಾರ ಸಕ್ಕರೆ ಮೇಲಿನ ತೆರಿಗೆಯನ್ನು ತಗ್ಗಿಸಿದೆ.

ಬೀಡಿ ಕೈಗಾರಿಕೆ

ಮಂಗಳೂರು— ದೇಶದಲ್ಲಿ ದಿನಕ್ಕೆ 140 ಕೋಟಿ ಬೀಡಿ ತಯಾರಾಗುತ್ತಿದೆ ಎಂದೂ, ಕೆಲಸಗಾರರಿಗೆ ಕೂಲಿಯಾಗಿ ವರ್ಷಕ್ಕೆ ರೂ. 110 ಕೋಟಿ ಕೊಡಲಾಗುತ್ತಿದೆಯೆಂದೂ, ಆದಾಯತೆರಿಗೆ ಮಾರಾಟ ತೆರಿಗೆ ಆಬ್ಕಾರಿ ತೆರಿಗೆಯಾಗಿ ಸರಕಾರಕ್ಕೆ ರೂ. 87 ಕೋಟಿ ದೊರೆಯುತ್ತಿದೆಯೆಂದೂ ಮಾರಕ್ಸಿಸ್ಟ್ ನಾಯಕ ಶ್ರೀ ಎ. ಕೆ. ಗೋಪಾಲ್ ಹೇಳಿದರು

ಹುಲಿಗಳ ರಕ್ಷಣೆ

ನವದೆಹಲಿ—ಇಂದು ಭಾರತದಲ್ಲಿ 1827 ಹುಲಿಗಳು ಮಾತ್ರ ಇದ್ದು, ಹುಲಿಗಳ ರಕ್ಷಣೆಯ ರೂ. 58 ಕೋಟಿ ಯೋಜನೆಯನ್ನು ಪ್ರಧಾನಿಯವರಿಗೆ ಅರ್ಪಿಸುವ ಬಾಗಿದೆ

★

ಸಿಂಹ ರಕ್ಷಣೆಗೆ ಕರ್ನಾಟಕ ಯತ್ನ

ಭಾರತದ ಮಾಜಿ ವೈಸರಾಯಿ ಲಾರ್ಡ್ ಕರ್ಜನ್ ಒಳ್ಳೆ ಕ್ರೀಡಾಪಟು, ಶಿಕಾರಿಯಲ್ಲಿ ಆಸಕ್ತರಾಗಿದ್ದರು. ದೇಶದಲ್ಲಿ ಗಿರ್ ಸಿಂಹ ಕಡಮೆಯಾಗುತ್ತಿರುವದನ್ನರಿತು ಆ ಸಿಂಹಗಳನ್ನು ಬೇಟೆಯಾಡುತ್ತಿರಲಿಲ್ಲವಲ್ಲದೆ, ಜುನಘಡ ನವಾಬರಿಗೆ ಸಿಂಹಗಳ ರಕ್ಷಣೆಗೆ ಸೂಚನೆ ಇತ್ತಿದ್ದರು.

ಅಂಚೆಚೀಟಿ ಪ್ರದರ್ಶನ

ನವದೆಹಲಿ— ಮುಂದಿನ ವರ್ಷ ನವಂಬರಿನಲ್ಲಿ ನಡೆಯುವ ಅಂತರರಾಷ್ಟ್ರೀಯ ಅಂಚೆಚೀಟಿ ಪ್ರದರ್ಶನದಲ್ಲಿ 80 ರಿಂದ130 ದೇಶಗಳು ಭಾಗವಹಿಸಲಿವೆಯೆಂದು ಸಂಪರ್ಕ ಮಂತ್ರಿ ಶ್ರೀ ಬಹುಗುಣರವರು ಪತ್ರಿಕೆಯವರಿಗೆ ತಿಳಿಸಿದರು.

ವುಡ್‌ಲ್ಯಾಂಡ್ 29 9 72 ರಿಂದ
ಶಿ ನ್ಮ ಆವೋಫ಼ ಪ್ರಾರಂಭ

ರಾಜೇಂದ್ರ ಕುಮಾರ್ ಆರ್ಪಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಅತ್ಯನೋಫ಼ ಚಿತ್ರ

ಜವಾನಿ ದಿವಾನಿ

ಪಾತ್ರ : ರಣಧೀರ್ ಕಪೂರ್, ಜಯಭಾದುರಿ

ಸಂಗೀತ : ಆರ್. ಡಿ. ಬರ್ಮನ್

ದಿನ 3 ಪ್ರದರ್ಶನಗಳು

ಅಪೆರಾ 22 9 72 ರಿಂದ

ಶ್ರೀ ನವನೀತ್ ಫಿಲಂಸ್‌ರವರ ಅಪೋಫ಼ ತಮಿಳು ಚಿತ್ರ

ಪುಗುಂದ ವೀಡು

ನಿರ್ದೇಶನ : ಪಟ್ಟು

ಪ್ರತಿ ದಿನ 3 ಪ್ರದರ್ಶನಗಳು

ಅಖಿಲ ಭಾರತದಲ್ಲಿ ಕೂಡಲೇ



ಗೋವಧೆ ನಿಶೇಧವಾಗಲಿ

SHAKTI
SUDHA

A Superb Tonic

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಪ-ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

★

ಆನೆ-ಹುಡುಗ

Quality Printing Neat Binding

Lakshminarasimha Press

Sivarampet, Mysore

Potect the Cow

For Rugs, Sweaters, and Kashmir Coats Visit Bank Road Bahusar

Edited Printedand Published by Dharmapracharanirata M S Krishna Rao (Propretor) at the Satvavad Press Chamarajapuram Mysore